ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1597
ಸದಸ್ಯರ ಹೆಸರು : ಶ್ರೀ ಮುನಿರಾಜುಗೌಡ ಪಿ.ಎಂ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಸಚಿವರು
ಉತ್ತರಿಸುವ ದಿನಾಂಕ : 11.03.2022

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರ ಸಾರಿಗೆ ಸಂಸ್ಥೆ ಇದುವರೆಗೆ ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ಒಟ್ಟು ಎಷ್ಟು ಸಂಖ್ಯೆ ಎಲೆಕ್ಟ್ರಿಕ್ ಬಸ್ಸುಗಳನ್ನು ಪಡೆದುಕೊಂಡಿದೆ;	ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ಬೆಂ.ಮ.ಸಾ.ಸಂಸ್ಥೆಗೆ ಮೆ|| ಎನ್.ವಿ.ವಿ.ಎನ್.ರವರು ಜೆಬಿಎಂ ಮಾದರಿಯ 90 ಹವಾನಿಯಂತ್ರಣ ರಹಿತ 9 ಮೀ ಎಲೆಕ್ಟ್ರಿಕ್ ಬಸ್ಸುಗಳನ್ನು ಸರಬರಾಜು ಮಾಡಿರುತ್ತಾರೆ.
ಆ)	ಎಲೆಕ್ಟ್ರಿಕ್ ಬಸ್ಸುಗಳನ್ನು ಯಾವ ಯಾವ ದಿನಾಂಕದಂದು ಬಿ.ಎಂ.ಟಿ.ಸಿ ಸಂಸ್ಥೆಗೆ ಹಸ್ತಾಂತರಿಸಲಾಯಿತು;	ಬಿ.ಎಂ.ಟಿ.ಸಿ ಸಂಸ್ಥೆಗೆ ಎಲೆಕ್ಟ್ರಿಕ್ ಬಸ್ಸುಗಳನ್ನು ಈ ಕೆಳಕಂಡಂತೆ ಸರಬರಾಜು ಮಾಡಿರುತ್ತಾರೆ: (ಕೆಳಗಿನ ಪಟ್ಟಿ)

ಕ್ರ. ಸಂ.	ಸರಬರಾಜು ಆದ ದಿನಾಂಕ	ವಾಹನಗಳ ಸಂಖ್ಯೆ
01.	29.09.2021	01
02.	08.11.2021	04
03.	17.12.2021	12
04.	21.12.2021	10
05.	22.12.2021	01
06.	23.12.2021	08
07.	24.12.2021	01
08.	25.12.2021	02
09.	26.12.2021	01
10.	27.12.2021	02
11.	28.12.2021	01
12.	31.12.2021	02
13.	21.01.2022	05
14.	22.01.2022	09
15.	24.01.2022	05
16.	28.01.2022	14
17.	29.01.2022	06
18.	31.01.2022	02
19.	01.02.2022	02
20.	05.02.2022	02
	ಒಟ್ಟು	**90**

ಕ್ರ.ಸಂ.	ಪ್ರಶ್ನೆ	ಉತ್ತರ
ಇ)	ಒಟ್ಟು ಸ್ವೀಕರಿಸಲಾಗಿರುವ ಎಲೆಕ್ಟ್ರಿಕ್ ಬಸ್ಸುಗಳ ಪೈಕಿ ಹಾಲಿ ಎಷ್ಟು ಬಸ್ಸುಗಳನ್ನು ಬಿ.ಎಂ.ಟಿ.ಸಿ ಸಂಸ್ಥೆ ಕಾರ್ಯಾಚರಣೆಗೆ	90 ಹವಾನಿಯಂತ್ರಣ ರಹಿತ 9 ಮೀ. ಎಲೆಕ್ಟ್ರಿಕ್ ಬಸ್ಸುಗಳನ್ನು ಸರಬರಾಜು ಮಾಡಿದ್ದು, ದಿನಾಂಕ.07.03.2022 ರಂತೆ 24 ವಾಹನಗಳು ಕಾರ್ಯಾಚರಣೆಯಲ್ಲಿರುತ್ತದೆ.

	ಒಳಪಡಿಸಿದೆ;	
ಈ)	ಬಿ.ಎಂ.ಟಿ.ಸಿ ಸಂಸ್ಥೆಗೆ ಹಸ್ತಾಂತರಿಸಲಾಗಿರುವ ಎಲ್ಲಾ ಎಲೆಕ್ಟ್ರಿಕ್ ಬಸ್ಸುಗಳನ್ನು ಕಾರ್ಯಾಚರಣೆಗೆ ಒಳಪಡಿಸಲು ವಿಳಂಬವಾಗುತ್ತಿರುವುದಕ್ಕೆ ಚಾರ್ಜಿಂಗ್ ಸ್ಟೇಷನ್‌ಗಳು ಲಭ್ಯವಿಲ್ಲದಿರುವುದು ಕಾರಣವೇ;	ಕರಾರು ಒಪ್ಪಂದದ ಪ್ರಕಾರ ಮೆ|| ಎನ್.ವಿ.ವಿ.ಎನ್. ರವರು ಚಾರ್ಜಿಂಗ್ ಸ್ಟೇಷನ್‌ಗಳನ್ನು ಅಳವಡಿಸಿ ಎಲ್ಲಾ 90 ವಾಹನಗಳನ್ನು ಆಚರಣೆ ಮಾಡಬೇಕಾಗಿರುತ್ತದೆ. ಆದರೆ, ಪ್ರಸ್ತುತ ಒಂದು ಘಟಕದಲ್ಲಿ ಮಾತ್ರ ಚಾರ್ಜಿಂಗ್ ಸ್ಟೇಷನ್ ಅಳವಡಿಸಿದ್ದು, ಇನ್ನೂ ಎರಡು ಘಟಕಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಅಳವಡಿಸದೇ ಇರುವುದರಿಂದ ಎಲೆಕ್ಟ್ರಿಕ್ ಬಸ್ಸುಗಳ ಕಾರ್ಯಾಚರಣೆಗೆ ವಿಳಂಬವಾಗುತ್ತಿದೆ.
ಉ)	ಬಿ.ಎಂ.ಟಿ.ಸಿ ಸಂಸ್ಥೆಯಿಂದ ಎಲ್ಲೆಲ್ಲಿ ಚಾರ್ಜಿಂಗ್ ಸೌಲಭ್ಯಗಳನ್ನು ಸ್ಥಾಪಿಸಲಾಗುತ್ತಿದೆ;	ಬಿ.ಎಂ.ಟಿ.ಸಿ ಸಂಸ್ಥೆಯಲ್ಲಿ ಮೆ|| ಎನ್.ವಿ.ವಿ.ಎನ್. ರವರು 04 ಚಾರ್ಜಿಂಗ್ ಸ್ಟೇಷನ್‌ಗಳನ್ನು ಕೆಂಗೇರಿ ಘಟಕದಲ್ಲಿ ಸ್ಥಾಪಿಸಲಾಗಿದ್ದು, ಯಶವಂತಪುರ ಹಾಗೂ ಕೆ.ಆರ್.ಪುರಂ ಘಟಕಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗುವುದು.
ಊ)	ಎಲ್ಲಾ ಎಲೆಕ್ಟ್ರಿಕ್ ಬಸ್ಸುಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಿರುವಂತೆ ತ್ವರಿತಗತಿಯಲ್ಲಿ ಅಗತ್ಯ ಸಂಖ್ಯೆ ಚಾರ್ಜಿಂಗ್ ಸೌಲಭ್ಯಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	ಬೆಂ.ಮ.ಸಾ.ಸಂಸ್ಥೆಯು ಮೆ|| ಎನ್.ವಿ.ವಿ.ಎನ್. ರವರಿಗೆ ಮೂರು ಘಟಕಗಳಲ್ಲಿ ತ್ವರಿತವಾಗಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಸೂಚಿಸಿದ್ದು, ಈಗಾಗಲೇ ಚಾರ್ಜಿಂಗ್ ಸ್ಟೇಷನ್‌ಗಳನ್ನು ಕೆಂಗೇರಿ ಘಟಕದಲ್ಲಿ ಸ್ಥಾಪಿಸಲಾಗಿದ್ದು, ಯಶವಂತಪುರ ಹಾಗೂ ಕೆ.ಆರ್.ಪುರಂ ಘಟಕಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಸದರಿ ಘಟಕಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಕಾರ್ಯವು ಅಂತಿಮಗೊಂಡ ನಂತರ ಉಳಿದ 76 ಎಲೆಕ್ಟ್ರಿಕ್ ಬಸ್ಸುಗಳನ್ನು ಕಾರ್ಯಾಚರಣೆಗೊಳಿಸಲಾಗುವುದು.

ಸಂಖ್ಯೆ: ಟಿಡಿ 76 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು